ಶ್ರೀ ಕೆ. ಜಯರಾಮ ಶೆಟ್ಟಿ : ನಾನು ಕಳಪೆ ದರ್ಜೆಯ ಅಕ್ಕಿಯನ್ನು ತಂದಿದ್ದೇನೆ. ಅದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ.

ಅಧ್ಯಕ್ಷರು : ಅಧನ್ನು ಸರ್ಕಾರಕ್ಕೆ ಕಳುಹಿಸಿ ಕೊಡಿ.

(2) ತಮಿಳುನಾಡಿನ ಮುಖ್ಯಮಂತ್ರಿಯವರ ಮೇಲೆ ರಾಜ್ಯಪಾಲರಿಂದ ಖಟ್ಲೆ ಹಾಕಲು ಅನುಮತಿ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ಸದನಕ್ಕೆ ಸಂಬಂಧಪಟ್ಟಿದ್ದಲ್ಲವೆಂದು ನನಗೆ ಅರ್ಥವಾಗಿದೆ. ಅಥವಾ ಮಾನ್ಯ ವಾಟಾಳ್ ನಾಗರಾಜ್‌ರವರು ಏನೂ ಗೊತ್ತಿಲ್ಲದೇ ಇದನ್ನು ತರುತ್ತಿದ್ದಾರೆ ಎಂಬ ಭಾವನೆ ಯಾರಿಗೂ ಬರುವುದು ಬೇಡ. ನಾವೂ, ನೀವು ಚರ್ಚೆ ಮಾಡುವಾಗ ನೀವೂ ಕೆಲವು ವಿಚಾರಗಳನ್ನು ಹೇಳಿದಿರಿ, ನಾನೂ ಕೆಲವು ವಿಚಾರಗಳನ್ನು ತಮ್ಮ ಜೊತೆ ಚರ್ಚೆ ಮಾಡಿದ್ದೇನೆ. ತಮಿಳ್ನಾಡಿನಲ್ಲಿ ಈಗ ಬಹಳ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ. ತಮಿಳು ನಾಡಿನ ಮಾನ್ಯ ರಾಜ್ಯಪಾಲರು ಅಲ್ಲಿನ ಮುಖ್ಯಿ ಮಂತ್ರಿಯವರ ಮೇಲೆ ಖಟ್ಲೆಯನ್ನು ಹಾಕಲು ಅನುಮತಿ ನೀಡಿರುವ ನನಗೆ ಆ ಸರ್ಕಾರದ ಬಗ್ಗೆ ಒಳ್ಳೆಯ ಅಭಿಪ್ರಾಯವಿಲ್ಲ.

ಅಧ್ಯಕ್ಷರು : ದಯವಿಟ್ಟು ಬೇಡಿ. ಇದು ಹೊಸ ಸಂಪ್ರದಾಯವಾಗುತ್ತದೆ. ದಯವಿಟ್ಟು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ನಾನು ಇನ್ನೂ ಮುಂದಕ್ಕೆ ಹೋಗಿಲ್ಲ. ತಾವು ಅವಕಾಶವನ್ನು ಕೊಟ್ಟರೆ ನಾನು ಮಾತನಾಡುತ್ತೇನೆ. ಹಿಂದೆ ನಾನು ಮಾನ್ಯ ರಾಜ್ಯಪಾಲರ ಬಗ್ಗೆ ಈ ಸದನದಲ್ಲಿ ಮಾತನಾಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಇವತ್ತು ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ದಯವಿಟ್ಟು ಬೇಡ. ಅವರು ಹೇಳಿಕೆ ಕೊಟ್ಟಿರುವುದು ಬೇರೆ.

ಶ್ರೀ ಹೆಚ್.ಡಿ. ದೇವೇಗೌಡ : ಪಾಯಿಂಟ್ ಆಫ್ ಆರ್ಡರ್. ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಹೊರಗಡೆ ಏನು ಬೇಕಾದರೂ ಹೇಳಿಕೊಳ್ಳಲಿ. ಆದರೆ ಈ ಸದನದಲ್ಲಿ ಈ ವಿಷಯವನ್ನು ಚರ್ಚೆ ಮಾಡುವುದಕ್ಕೆ ದಯವಿಟ್ಟು ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ಸಂಪ್ರದಾಯವಲ್ಲ. ಮಾನ್ಯ ರಾಜ್ಯಪಾಲರ ನೀತಿಯನ್ನು ನಾನು ವಿರೋಧಿಸುತ್ತೇನೆ. ನಾಳೆ ಈ ಮುಖ್ಯಿ ಮಂತ್ರಿಯ ಮೇಲೆ ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ರಾಜ್ಯಪಾಲರುಗಳು ಮುಖ್ಯಿಮಂತ್ರಿಗಳ ಮೇಲೆ

(ಗೊಂದಲ)

ಅಧ್ಯಕ್ಷರು : ಡೋಂಟ್ ರೆಕಾರ್ಡ್. Let us create a new precedent.

(3) ಸದನದ ಹೊರಗಡೆ ಸರ್ಕಾರದ ಪಾಲಿಸಿ ವಿಚಾರಗಳನ್ನು ಪ್ರಸ್ತಾವನೆ

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಒಂದು ಸತ್ಸಂಪ್ರದಾಯವನ್ನು ಹಾಕಿಕೊಂಡು ಬಂದಿದ್ದೇವೆ. ಸದನವು ನಡೆಯುವ ಕಾಲದಲ್ಲಿ ಪಾಲಿಸಿ ವಿಚಾರಗಳಿಗೆ ಸಂಬಂಧಪಟ್ಟಂತೆ ಯಾವುದೇ ವಿಚಾರವನ್ನೂ ಸದನದಿಂದ ಹೊರಗಡೆ ಪ್ರಸ್ತಾಪ ಮಾಡಬಾರದು ಎಂದು ಇದೆ. ಆದರೆ ನಾನು ಈಗ ಪ್ರಿವಿಲೇಜ್ ವಿಚಾರವನ್ನು ಹೇಳುತ್ತಿಲ್ಲ. ನಿನ್ನೆಯ ದಿವಸ ಪೊಲೀಸ್ ಅಧಿಕಾರಿಗಳಿಗೆ ಕೊಟ್ಟಿರತಕ್ಕ ಎಮಾಲ್ಯುಮೆಂಟ್ಸ್‌ನ್ನೆಲ್ಲಾ ಹೊರಗಡೆಯೇ ಅನೌನ್ಸ್ ಮಾಡಿದ್ದಾರೆ. ಮುಂದೆ ಇಂಥಾದ್ದು

ಆಗಬಾರದೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಸದನ ನಡೆಯುವ ಸಂದರ್ಭದಲ್ಲಿ .....

Sri H.D. Devegowda : It is not a policy matter.

Sri H.N. Nanje gowda : Then what else it is. are you not paying it from the state Exchequer? ಅದು ಹೇಗೆ ಆಗುವುದಿಲ್ಲ ಎಂಬುದು ನನಗೆ ಅರ್ಥವಾಗುವುದಿಲ್ಲ. ಇದರ ಬಗ್ಗೆ ಪ್ರಿವಿಲೇಜ್ ಮೋಷನ್ ಹಾಕಿದರೆ ಲೋಕಸಭೆಯ ಸುಮಾರು ಹತ್ತು ರೂಲಿಂಗ್ಸ್‌ನ್ನು ನಾನು ತರುತ್ತೇನೆ. ಆದರೆ ಅದನ್ನು ನಾನು ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಾವು ಸತ್ಸಂಪ್ರದಾಯವನ್ನು ಹಾಕಿಕೊಳ್ಳೋಣ. ಆದರೆ ಹೊರಗಡೆ ಈ ರೀತಿ ಮಾಡುವುದು ಬೇಡ ಎಂದು ನನ್ನ ವಿನಂತಿ.

ಶ್ರೀ ವಾಟಾಳ್ ನಾಗರಾಜ್ : ಸನ್ಮಾನ್ಯ ಅಧ್ಯಕ್ಷರೇ, ತಮಿಳುನಾಡಿನ ರಾಜ್ಯಪಾಲರು.....

ಅಧ್ಯಕ್ಷರು : ಈ ವಿಷಯ ನಮಗೆ ಸಂಬಂಧಪಡುವುದಿಲ್ಲ. ಆದ್ದರಿಂದ ಯಾವುದೂ ಕಡತಕ್ಕೆ ಹೋಗುವುದಿಲ್ಲ

ಅಧ್ಯಕ್ಷರು ಆದೇಶದ ಮೇರೆಗೆ ಮಾನ್ಯ ಸದಸ್ಯರ ಪ್ರಸ್ತಾಪವನ್ನು ರೆಕಾರ್ಡ್ ಮಾಡಲಿಲ್ಲ.

ಗಮನ ಸೆಳೆಯುವ ಸೂಚನೆಗಳು

Reg : Purchase of Medicines by the Department of Animal Husbandry by violating the rules.

ಶ್ರೀ ವೈ. ರಾಮಕೃಷ್ಣ (ಅನೇಕಲ್) : ಅಧ್ಯಕ್ಷರೇ, I call the attention of the Hon. Minister of State for Animal Husbandry to the loss incurred by the Government Exchequer on account of purchase of Medicines by the Department of Animal Husbandry by violating the rules.

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ,

1994-95ನೇ ಸಾಲಿನಲ್ಲಿ ಪಶುಸಂಗೋಪನಾ ಇಲಾಖೆಗೆ ಔಷಧಿ, ರಸಾಯನಿಕಗಳು ಮತ್ತು ಆಸ್ಪತ್ರೆ ಸಲಕರಣೆಗಳನ್ನು ಖರೀದಿಸಲು ಯೋಜನೆ ಮತ್ತು ಯೋಜನೇತರ ಬಾಬ್ತಿನಲ್ಲಿ ಒಟ್ಟು 416.00 ಲಕ್ಷ ರೂಪಾಯಿಗಳು ಲಭ್ಯವಿದೆ. ದರ ಗುತ್ತಿಗೆಗಳನ್ನು ಸರ್ಕಾರದ ಅನುಮೋದನೆ ಪಡೆದು ನಿಗಧಿಪಡಿಸಿದ ಮೇಲೆ ನಿರ್ದೇಶಕರು ಈ ದರಗುತ್ತಿಗೆದಾರ ಕಂಪೆನಿಗಳಿಂದ ಔಷಧಿಗಳನ್ನು ಖರೀದಿಸಲು ಅಧಿಕಾರ ಹೊಂದಿರುತ್ತಾರೆ. ಈ ರೀತಿ ದರ ಗುತ್ತಿಗೆಗಳನ್ನು ನಿಗದಿಪಡಿಸಲು ನಿರ್ದೇಶಕರು ಟೆಂಡರ್ ಕರೆದು, ಅದರ ಪೂರ್ಣ ವಿವರಗಳನ್ನೆಲ್ಲಾ ತಯಾರಿಸಿ, ಸರ್ಕಾರ ಈ ವಿಷಯದ ಬಗ್ಗೆ ರಚಿಸಿರುವ ಸಮಿತಿಗಳ ಮುಂದೆ ನಿರ್ಧಾರಕ್ಕೆ ಇಡುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಎಹೆಚ್‌ಎಫ್‌ಎಫ್ 38 ಎಹೆಚ್‌ಪಿ 94 ದಿನಾಂಕ: 24-5-94 ಮತ್ತು ಎಹೆಚ್‌ಎಫ್‌ಎಫ್ 176 ವಿಎಡಿ 94 ದಿನಾಂಕ 24-5-94ರ ಪ್ರಕಾರ ಈ ವಿಷಯದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಸರ್ಕಾರವು ಎರಡು ಮಟ್ಟದಲ್ಲಿ (ಎ) ತಾಂತ್ರಿಕ ಸಮಿತಿ ಮತ್ತು (ಬಿ) ಉನ್ನತ ಮಟ್ಟದ ಖರೀದಿ ಸಮಿತಿಗಳನ್ನು ರಚಿಸಿದೆ. ಈ ಪ್ರಸ್ತಾವನೆಗಳು ಎರಡೂ ಮಟ್ಟದ ಸಮಿತಿಗಳಿಂದ ಪರಿಶೀಲಿಸಿದ